1600 ಸರಣಿಯ ಕರೆಗಳ ಬಗ್ಗೆ ಪ್ರಮುಖ ಮಾಹಿತಿ

1600 ರಿಂದ ಪ್ರಾರಂಭವಾಗುವ ಸಂಖ್ಯಾ ಸರಣಿಯಿಂದ ನನಗೆ ಕರೆ ಬಂದರೆ ಅದರ ಅರ್ಥವೇನು?

1600 ರಿಂದ ಪ್ರಾರಂಭವಾಗುವ ಸಂಖ್ಯಾ ಸರಣಿಯನ್ನು ನಿಯಂತ್ರಿತ ಹಣಕಾಸು ಸಂಸ್ಥೆಗಳು ಸೇವೆ ಹಾಗೂ ವ್ಯವಹಾರ ಸಂಬಂಧಿತ ಕರೆಗಳಿಗೆ ಬಳಸುತ್ತವೆ. ಇದರಿಂದ ಗ್ರಾಹಕರು ಹಣಕಾಸು ಸಂಸ್ಥೆಗಳಿಂದ ಬರುವ ಅಧಿಕೃತ ಕರೆಗಳನ್ನು ಗುರುತಿಸಲು ಸಹಾಯವಾಗುತ್ತದೆ.

ಅಧಿಕೃತ ಕರೆಯನ್ನು ಹೇಗೆ ಗುರುತಿಸಬಹುದು?

1. ಬರುವ ಕರೆ 1600 ರಿಂದ ಆರಂಭವಾಗಿದೆಯೇ ಎಂದು ಪರಿಶೀಲಿಸಿ. ಹೌದಾದರೆ, ಅದು ನಿಮ್ಮ ಅಧಿಕೃತ ಹಣಕಾಸು ಸೇವಾ ಪೂರೈಕೆದಾರರಿಂದ ಬಂದ ಸೇವಾ ಕರೆ ಆಗಿದೆ.
2. ಸಂದೇಹವಿದ್ದರೆ, ಹಣಕಾಸು ಸಂಸ್ಥೆಯ ಅಧಿಕೃತ ವೆಬ್‌ಸೈಟ್ ಅಥವಾ ಗ್ರಾಹಕ ಸೇವಾ ಸಂಖ್ಯೆಯ ಮೂಲಕ ಕರೆ ಮಾಡಿದವರ ಗುರುತನ್ನು ದೃಢೀಕರಿಸಿ.

ಡಿಎನ್‌ಡಿ ಮತ್ತು ಯುಸಿಸಿ ರಕ್ಷಣೆ

ಅನಪೇಕ್ಷಿತ ವಾಣಿಜ್ಯ ಸಂವಹನ (ಯುಸಿಸಿ) ಪಡೆಯುವುದನ್ನು ತಪ್ಪಿಸುವುದು ಹೇಗೆ?

ಗ್ರಾಹಕರು ಎಲ್ಲಾ ವಾಣಿಜ್ಯ ಸಂವಹನಗಳನ್ನು (ಕರೆಗಳು ಮತ್ತು ಎಸ್‌ಎಂಎಸ್) ನಿರ್ಬಂಧಿಸಬಹುದು ಅಥವಾ ಏಳು ನಿರ್ದಿಷ್ಟ ವರ್ಗಗಳಿಂದ ಅನಗತ್ಯ ಯುಸಿಸಿ ಗಳನ್ನು ನಿರ್ಬಂಧಿಸಬಹುದು:

1. ಬ್ಯಾಂಕಿಂಗ್/ವಿಮೆ/ಹಣಕಾಸು ಉತ್ಪನ್ನಗಳು/ಕ್ರೆಡಿಟ್ ಕಾರ್ಡ್‌ಗಳು
2. ರಿಯಲ್ ಎಸ್ಟೇಟ್
3. ಶಿಕ್ಷಣ
4. ಆರೋಗ್ಯ
5. ಗ್ರಾಹಕ ವಸ್ತುಗಳು ಮತ್ತು ವಾಹನಗಳು
6. ಸಂವಹನ / ಪ್ರಸಾರ / ಮನರಂಜನೆ / ಐಟಿ
7. ಪ್ರವಾಸೋದ್ಯಮ ಮತ್ತು ವಿರಾಮ. ಡಿಎನ್‌ಡಿ ರಿಜಿಸ್ಟ್ರಿ ಎಂದೂ ಸಹ ಕರೆಯಲ್ಪಡುವ ರಾಷ್ಟ್ರೀಯ ಗ್ರಾಹಕ ಆದ್ಯತೆ ನೋಂದಣಿ (ಎನ್‌ಸಿಪಿಆರ್) ಯಲ್ಲಿ ಆದ್ಯತೆಗಳನ್ನು ನೋಂದಾಯಿಸುವ ಮೂಲಕ ಇದನ್ನು ಮಾಡಬಹುದು.

ಎನ್‌ಸಿಪಿಆರ್ ನಲ್ಲಿ ನೋಂದಾಯಿಸಲು ಇರುವ ಕಾರ್ಯವಿಧಾನವೇನು?

ಡಿಎನ್‌ಡಿ ನೋಂದಣಿ:

ಯುಸಿಸಿ ಯಿಂದ ಉಂಟಾಗುವ ಅನಾನುಕೂಲತೆಯನ್ನು ತಪ್ಪಿಸಲು, ಗ್ರಾಹಕರು ಟೆಲಿಕಾಂ ಸೇವಾ ಪೂರೈಕೆದಾರರ ಅಪ್ಲಿಕೇಶನ್/ವೆಬ್‌ಸೈಟ್, ಟ್ರಾಯ್ ಡಿಎನ್‌ಡಿ ಅಪ್ಲಿಕೇಶನ್ ನಿಂದ ಅಥವಾ ‘1909’ ಕ್ಕೆ

ಕರೆಮಾಡುವ/ ಎಸ್ಎಂಎಸ್ ಕಳುಹಿಸುವ ಮೂಲಕ ಎಲ್ಲಾ ವಾಣಿಜ್ಯ ಸಂವಹನಗಳನ್ನು ಅಥವಾ ಆದ್ಯತೆಯ ವರ್ಗಗಳ ಪ್ರಕಾರ ಅನಗತ್ಯವಾದದ್ದನ್ನು ನಿರ್ಬಂಧಿಸಲು ಆಯ್ಕೆ ಮಾಡಬಹುದು.

ದೂರು ನೀಡುವ ಕಾರ್ಯವಿಧಾನವೇನು?

ದೂರುಗಳ ನೋಂದಣಿ:

1. ಡಿಎನ್‌ಡಿ ನಲ್ಲಿ ನೋಂದಾಯಿಸಿದ ನಂತರವೂ ನೀವು ಸ್ಪಾಮ್ ಸ್ವೀಕರಿಸಿದರೆ: ನಿಮ್ಮ ಸಂಬಂಧಿತ ಟೆಲಿಕಾಂ ಸೇವಾ ಪೂರೈಕೆದಾರರ ಅಪ್ಲಿಕೇಶನ್/ ವೆಬ್‌ಸೈಟ್, ಟ್ರಾಯ್ ಡಿಎನ್‌ಡಿ ಅಪ್ಲಿಕೇಶನ್ ನಿಂದ ಅಥವಾ '1909' ಕ್ಕೆ ಕರೆ ಮಾಡುವ/ ಎಸ್ಎಂಎಸ್ ಕಳುಹಿಸುವ ಮೂಲಕ ಡಿಎನ್‌ಡಿ ದೂರನ್ನು ಸಲ್ಲಿಸಿ.

2. ನೀವು ಶಂಕಿತ ವಂಚನೆಯ ಸಂವಹನವನ್ನು ಸ್ವೀಕರಿಸಿದರೆ: ಕಳೆದ 30 ದಿನಗಳಲ್ಲಿ ಸ್ವೀಕರಿಸಿದ ಯಾವುದೇ ಶಂಕಿತ ವಂಚನೆಯ ಸಂವಹನವನ್ನು ದೂರಸಂಪರ್ಕ ಇಲಾಖೆಯ (ಡಿಒಟಿ) 'ಚಕ್ಷು' ವೇದಿಕೆಯಲ್ಲಿ https://sancharsaathi.gov.in/sfc/ ವರದಿ ಮಾಡಿ.

3. ವಂಚನೆ ಅಥವಾ ಸೈಬರ್-ಅಪರಾಧ ಈಗಾಗಲೇ ನಡೆದಿದ್ದರೆ: ನೀವು ಈಗಾಗಲೇ ಹಣಕಾಸಿನ ವಂಚನೆಯಿಂದಾಗಿ ಹಣವನ್ನು ಕಳೆದುಕೊಂಡಿದ್ದರೆ ಅಥವಾ ಸೈಬರ್ ಅಪರಾಧಕ್ಕೆ ಬಲಿಯಾಗಿದ್ದರೆ, ಅಂತಹ ಘಟನೆಯನ್ನು ಸೈಬರ್ ಅಪರಾಧ ಸಹಾಯವಾಣಿ ಸಂಖ್ಯೆ '1930' ಕ್ಕೆ ಅಥವಾ https://www.cybercrime.gov.in ವೆಬ್‌ಸೈಟ್ ಮೂಲಕ ವರದಿ ಮಾಡಿ.